ಸಿ.ಸಿ .ನಂ. 194/2022 ಪಿಡಬ್ಲ್ಯೂ: 1

ದಿನಾಂಕ: 05-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ಆರೋಪಿಯ ಪರವಾಗಿ: ಶ್ರೀ ಪಿ ಎಸ್ ಎನ್ ವಕೀಲರಿಂದ:**

7. ನಾವು ಕೊಟ್ಟಿದ್ದೆವು ಎಂದು ಹೇಳುವ ಸಾಲ ಬಿಸಿನೆಸ್ ಗೋಸ್ಕರ ಕೊಟ್ಟಿರುತ್ತೇವೆ . ಯಾವ ಬಿಸಿನೆಸ್ ಮಾಡುತ್ತಾರೆ ಆ ಬಗ್ಗೆ ಯಾವುದೇ ದಾಖಲೆಗಳನ್ನು ನಾವು ಪರಿಶೀಲನೆ ಮಾಡಿಲ್ಲ. ಸಾಲದ ಅರ್ಜಿ ಬಂದಾಗ ನಮ್ಮ ಆಫೀಸ್ ನಲ್ಲಿ ಸಾಲದ ಅರ್ಜಿಗೆ ಸಂಬಂಧಪಟ್ಟಂತೆ ಪ್ಯಾನಲ್ ಇರಬೇಕಾಗುತ್ತದೆ ಎಂದರೆ ಸರಿ . ಈ ಸಾಲಕ್ಕೆ ಸಂಬಂಧಪಟ್ಟಂತೆ ಆಫೀಸ್ ವರದಿಯನ್ನು ಶಾಖಾ ವ್ಯವಸ್ಥಾಪಕರು ಮಾಡಿರುತ್ತಾರೆ . ಆ ಸಮಯದಲ್ಲಿ ಇದ್ದ ಶಾಖಾ ವ್ಯವಸ್ಥಾಪಕರು ವರ್ಗಾವಣೆಗೊಂಡಿರುತ್ತಾರೆ . ಅವರ ಹೆಸರು ನೆನಪಿಲ್ಲ. ಸಾಲದ ಅರ್ಜಿಯಲ್ಲಿ ಹೇಳಿರುವಂತಹ ಉದ್ಯೋಗವನ್ನು ಅವರು ನಡೆಸುತ್ತಿದ್ದಾರೋ ಎಂಬ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ವರದಿಯನ್ನು ನೀಡಬೇಕಾಗುತ್ತದೆ ಎಂದರೆ ಸರಿ . ಸಾಲದ ಅರ್ಜಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿಲ್ಲ , ಅವರು ಹೇಳಿದ ಮೆರೆಗೆ ಬಿಸಿನೆಸ್ ಎಂದು ನಮೂದಿಸಿದ್ದೇವೆ.

8. ದೊಡ್ಡ ಮೊತ್ತದ ಸಾಲದ ಅರ್ಜಿ ಬಂದಾಗ ಅದು ಆಡಳಿತ ಮಂಡಳಿಯ ಮುಂದೆ ನಿರ್ಧಾರಗೊಳ್ಳಬೇಕಾಗುತ್ತದೆ ಎಂದರೆ ಸರಿ . ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆಡಳಿತ ಮಂಡಳಿಯ ಸಭೆ ನಡೆದ ದಿನಾಂಕ ನೆನಪಿಲ್ಲ, ಆದರೆ ತಿಂಗಳ ಮೊದಲನೇ ವಾರದಲ್ಲಿ ಆಡಳಿತ ಮಂಡಳಿಯ ಸಭೆ ನಡೆಯುತ್ತದೆ. ಒಂದು ಸಾಲದ ಅರ್ಜಿ ಬಂದಾಗ ಅದರ ದಾಖಲಾತಿಗಳನ್ನು ಪರಿಶೀಲಿಸಲು ಎಷ್ಟು ಸಮಯ ಬೇಕಾಗುತ್ತದೆ ಅದು ಆಡಳಿತ ಮಂಡಳಿಯ ಮೇಲೆ ಅವಲಂಬಿತವಾಗಿರುತ್ತದೆ . ದಾಖಲಾತಿಗಳನ್ನು ಪಡೆದುಕೊಂಡು ವರದಿ ಸಲ್ಲಿಸುವುದು ಆಡಳಿತ ಮಂಡಳಿಯ ಕೆಲಸ ಅಲ್ಲ ಎಂದರೆ ಸರಿ . ಆಫೀಸ್ ವರದಿ ನಂತರ ಮುಖ್ಯ ಕಾರ್ಯನಿರ್ವಾಹಕರು ಕೂಡ ವರದಿಯನ್ನು ಸಲ್ಲಿಸಬೇಕಾಗುತ್ತದೆ ಎಂದರೆ ಸರಿ . ಒಂದು ವೇಳೆ ಸಾಲದ ಅರ್ಜಿಗೆ ಸಂಬಂಧಪಟ್ಟಂತೆ ಸಾಲದ ಅರ್ಜಿಯ ಕೊನೆಯಲ್ಲಿ ಯಾವ ದಿನಾಂಕದಂದು ಸಾಲ ಮಂಜೂರಾಯಿತು , ಷರಾ ಬರೆಯುತ್ತಾರೆ ಎಂದರೆ ಸರಿ . ಈ ಪ್ರಕರಣದಲ್ಲಿ ಸಾಲದ ಅರ್ಜಿ ಯಾವ ಠರಾವು ನಂಬರನೊಂದಿಗೆ ಯಾವ ದಿನಾಂಕದಂದು ಮಂಜೂರಾಗಿದೆ ಎಂದು ಬರೆದಿದ್ದಾರೆ ನೆನಪಿಲ್ಲ .

ಒಂದುವೇಳೆ ಆಡಳಿತ ಮಂಡಳಿಯ ಸಭೆ ನಡೆಯದೇ ಇದ್ದರೆ ಹಾಗೂ ಸಾಲ ಮಂಜೂರಾಗದೇ ಇದ್ದರೆ ಆ ಬಗ್ಗೆ ಸಾಲದ ಅರ್ಜಿಯಲ್ಲಿ ಬರೆಯುವುದಿಲ್ಲ ಎಂದರೆ ಸಾಕ್ಷಿ ಕೆಲವೊಮ್ಮೆ ನಜರ್ ತಪ್ಪಿನಿಂದ ಬರೆಯದೇ ಇರಬಹುದು ಎಂದು ನುಡಿದಿರುತ್ತಾರೆ . ಸಾಲ ಯಾವ ದಿನ ಮಂಜೂರಾಯಿತು ಹಾಗೂ ಠರಾವಿನ ಕುರಿತಂತೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ಸಾಲ ಮಂಜೂರಾದ ದಿನಾಂಕ ಹಾಗೂ ಠರಾವಿನ ಬಗ್ಗೆ ಅಕೌಂಟ್ ಸ್ಟೇಟ್ ಮೆಂಟ್ ಹಾಜರು ಪಡಿಸಿದ್ದೇವೆ . ನಾನು ಹೇಳುವ ಹಾಗೆ ಅಕೌಂಟ್ ಸ್ಟೇಟ್ ಮೆಂಟ್ ಸಾಲ ಮಂಜೂರಾದ ಬಗ್ಗೆ ಹಾಗೂ ಠರಾವಿನ ಬಗ್ಗೆ ದಾಖಲಾತಿ ಅಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನಾವು ಯಾವ ಯಾವ ದಾಖಲಾತಿಗಳನ್ನು ಪಡೆದುಕೊಂಡಿದ್ದೇವೆ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇವೆ .

9. ಸಾಲದ ಹಣವನ್ನು ಆರೋಪಿಗೆ ಆತನ ಎಸ್ ಬಿ ಖಾತೆಗೆ ಹಾಕಿರುತ್ತೇವೆ . ಆತನ ಎಸ್ ಬಿ ಖಾತೆಗೆ ಯಾವ ಮೂಲಕ ಟ್ರಾನ್ಸಫರ್ ಮಾಡಲಾಗಿದೆ ಹೇಳಲು ಆಗುವುದಿಲ್ಲ. ಒಂದುವೇಳೆ ಆ ರೀತಿ ಸಂದಾಯ ಮಾಡಿದ್ದಲ್ಲಿ ಆ ಬಗ್ಗೆ ನಮ್ಮಲ್ಲಿ ದಾಖಲಾತಿಗಳು ಇರುತ್ತವೆ ಎಂದರೆ ಸರಿ . ಸಾಲಗಾರರಿಗೆ ಹಣ ಸಂದಾಯ ಮಾಡಿದ್ದೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಆತನ ಉಳಿತಾಯ ಖಾತೆಗೆ ಯಾವ ರೀತಿ ಹಣ ಸಂದಾಯ ಮಾಡಿದ್ದೇವೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ. ಆರೋಪಿಯ ಉಳಿತಾಯ ಖಾತೆ ನಂಬರ ನೆನಪಿಲ್ಲ. ಆರೋಪಿಯ ಉಳಿತಾಯ ಖಾತೆಗೆ ಯಾವುದೇ ಹಣ ಸಂದಾಯವಾಗಿಲ್ಲ ಎಂದರೆ ಸರಿಯಲ್ಲ.

10. ರಾಜಾರಾಮ ಶಿವಾ ಭಟ್ ಇವರ ನಮ್ಮ ಬ್ಯಾಂಕಿನಲ್ಲಿ ಎಷ್ಟು ಎಫ್ ಡಿ ಗಳಿವೆ ಗೊತ್ತಿಲ್ಲ . ಸಾಲದ ಅರ್ಜಿಯಲ್ಲಿ For office use ಎಂದು ಕಾಲಂ ಇರುತ್ತದೆ ಎಂದರೆ ಸರಿ . ಆ ಕಾಲಂನಲ್ಲಿ ಅಪ್ಲಿಕೇಶನ್ ದಿನಾಂಕ , ಫೈಲ್ ನಂಬರ , ಅಪ್ಲಿಕೇಶನ್ ನಂಬರ , ಅಕೌಂಟ್ ನಂಬರ ಹಾಗೂ ಬೇಕಾದ ಸಾಲದ ವಿವರ ಇರಬೇಕಾಗುತ್ತದೆ ಎಂದರೆ ಸರಿ . ಆ ಕಾಲಂನ್ನು ನಮ್ಮ ಆಫೀಸ್ ನ ಪರಿಶೀಲನಾ ಅಧಿಕಾರ ತುಂಬಬೇಕಾಗುತ್ತದೆ ಎಂದರೆ ಸರಿ . ಪರಿಶೀಲನಾ ಅಧಿಕಾರಿ ಆ ಸಾಲದ ಅರ್ಜಿಯನ್ನು ತುಂಬದೇ ಇದ್ದಾಗ ಅದು ಮುಂದಕ್ಕೆ ಹೋಗುವುದಿಲ್ಲ ಎಂದರೆ ಸರಿ . ಸಾಲದ ಅರ್ಜಿಯನ್ನು ಪರಿಶೀಲನೆ ಮಾಡಿಯೇ

ಕೊಡುತ್ತೇವೆ . ಈ ಸಾಲ ಮಂಜೂರಾದ ಬಗ್ಗೆ ಆಗಿರುವ ಠರಾವನ್ನು ನಾನು ನೋಡಿದ್ದೇನೆ. ಠರಾವಿಗೆ ಎಷ್ಟು ಜನ ಸದಸ್ಯರು ಸಹಿ ಹಾಕಿದ್ದಾರೆ ನೆನಪಿಗೆ ಬರುತ್ತಿಲ್ಲ . ಅದು ಯಾವ ದಿನಾಂಕದ ಠರಾವು ಆಗಿತ್ತು ಹಾಗೂ ಠರಾವಿನ ನಂಬರನ್ನು ನೋಡಿದ್ದೇನೆ . ಅಂತಹ ಠರಾವು ನಮ್ಮ ಬ್ಯಾಂಕಿನಲ್ಲಿ ಯಾವತ್ತೂ ಇರುತ್ತದೆ ಎಂದರೆ ಸರಿ . ಆಡಳಿತ ಮಂಡಳಿಯಲ್ಲಿ ಈ ಸಾಲದ ಅರ್ಜಿ ಮಂಜೂರಾಗಿತ್ತು ಎಂದು ಪುರಾವೆ ಮಾಡಲು ಆ ಠರಾವಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ . ನಾನು ಹೇಳಿದಂತೆ ಈ ಸಾಲದ ಅರ್ಜಿಗೆ ಸಂಬಂಧಪಟ್ಟಂತೆ ಯಾವುದೇ ಠರಾವು ಆಗಿಲ್ಲ ಹಾಗೂ ಸಾಲ ಮಂಜೂರಾಗಿಲ್ಲ ಎಂದರೆ ಸರಿಯಲ್ಲ. ಆ ಕಾರಣ ನಾವು ಸಾಲದ ಅರ್ಜಿ ಆಡಳಿತ ಮಂಡಳಿಯಲ್ಲಿ ಠರಾವು ಆಗಿ ಮಂಜೂರಾಗಿತ್ತು ಎಂದು ಪುರಾವೆ ಮಾಡುವ ಜವಾಬ್ದಾರಿ ನಮ್ಮದಾಗಿರುತ್ತದೆ ಎಂದರೆ ಸರಿಯಲ್ಲ . ಸಾಕ್ಷಿ ನಾವೇ ಸಾಲ ಕೊಟ್ಟಿದ್ದು ಇರುತ್ತದೆ, ಅವರು ತೆಗೆದುಕೊಂಡಿದ್ದು ಇರುತ್ತದೆ ಎಂದು ನುಡಿದಿರುತ್ತಾರೆ . ನಾವು ನ್ಯಾಯಾಲಯಕ್ಕೆ ಹಾಜರು ಪಡಿಸಿದ ದಾಖಲಾತಿಗಳಲ್ಲಿ ಯಾವ ದಿನಾಂಕದಂದು ಠರಾವು ಆಯಿತು ಯಾವ ದಿನಾಂಕದಂದು ಸಾಲ ಮಂಜೂರಾಯಿತು ಎಂದು ಇಲ್ಲ ಎಂದರೆ ಸಾಕ್ಷಿ ಸಾಲದ ಅರ್ಜಿ ಹಾಗೂ ರಸೀದಿಯಲ್ಲಿರುತ್ತದೆ ಎಂದು ನುಡಿದಿರುತ್ತಾರೆ . ಸದರಿ ದಾಖಲಾತಿಯಲ್ಲಿ ಸಾಲ ಮಂಜೂರಾಯಿತು ಎಂದು ತೋರಿಸುವ ಯಾವುದೇ ದಿನಾಂಕ ಇಲ್ಲ ಎಂದರೆ ಸರಿ . ನಿಪಿ-11 ದಾಖಲಾತಿಯಲ್ಲಿ ಸಾಲ ಮಂಜೂರಾದ ದಿನಾಂಕ ಇಲ್ಲ. ಯಾವ ದಾಖಲಾತಿಗಳಲ್ಲಿಯೂ ಕೂಡ ಸಾಲ ಇಂತಹ ದಿನಾಂಕಂದು ಮಂಜೂರಾಗಿತ್ತು ಹಾಗೂ ಠರಾವು ಆಗಿತ್ತು ಹಾಗೂ ಠರಾವು ನಂಬರ ನಮೂದು ಇಲ್ಲ ಎಂದರೆ ಸಾಕ್ಷಿ ನಿಪಿ-8 ನ್ನು ತೋರಿಸಿ ಸಾಲ ಮಂಜೂರಾದ ಬಗ್ಗೆ ಇದೆ ಎಂದು ನುಡಿದಿರುತ್ತಾರೆ . ಸದರಿ ದಾಖಲಾತಿಯಲ್ಲಿ ಯಾವ ದಿನಾಂಕದಂದು ಸಾಲ ಮಂಜೂರಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿ . ಈ ಸಾಲಕ್ಕೆ ಸಂಬಂಧಪಟ್ಟಂತೆ ಯಾವುದೇ ಹಣ ಮಂಜೂರಾಗಿಲ್ಲ ಕಾರಣ ದಿನಾಂಕವನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿಯ ಸಾಲದ ಅರ್ಜಿ ಕೂಡ ಪರಿಶೀಲನೆ ಆಗಿರಿಲ್ಲ , ಕಾರಣ ಅರ್ಜಿಯಲ್ಲಿರುವ office use only ಎಂಬ ಕಾಲಂ ಖಾಲಿಯಾಗಿದೆ ಎಂದರೆ ಸರಿಯಲ್ಲ . ಅದೇ ಕಾರಣಕ್ಕೆ ನಾವು ಈ ಪ್ರಕ್ರರಣದಲಿಲ ಯಾವುದೇ ಅಕೌಂಟ್ ಸ್ಟೇಟ್ ಮೆಂಟ್ ನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ನಾವು ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಅನುಕೂಲವಾಗಿ ಸೃಷ್ಟಿ ಮಾಡಿರುವ ದಾಖಲಾತಿಗಳನ್ನು ಮಾತ್ರ ಹಾಜರು

ಪಡಿಸಿದ್ದೇವೆ ಎಂದರೆ ಸರಿಯಲ್ಲ. ಈ ಸಾಲದ ಠರಾವು ಹಾಗೂ ಅಕೌಂಟ್ ಸ್ಟೇಟ್ ಮೆಂಟ್ ನ್ನು ಹಾಜರು ಪಡಿಸಿಲ್ಲ ಒಂದುವೇಳೆ ನ್ಯಾಯಾಲಯ ಅಂತಹ ದಾಖಲಾತಿಗಳನ್ನು ಹಾಜರು ಪಡಿಸುವಂತೆ ಹೇಳಿದರೆ ಅಂತಹ ದಾಖಲಾತಿಗಳನ್ನು ಸೃಷ್ಟಿಸಿ ಹಾಜರು ಪಡಿಸುವ ಸಾಧ್ಯ ತೆ ಇದೆ ಎಂದರೆ ಸರಿಯಲ್ಲ . ಅಂತಹ ದಾಖಲಾತಿಗಳು ಇದ್ದಲ್ಲಿ ಅವುಗಳನ್ನು ಈಗಾಗಲೇ ಹಾಜರು ಪಡಿಸುತ್ತಿದ್ದೇವು ಇಷ್ಟು ವರ್ಷ ಕಾಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ಇಲ್ಲಿಯವರೆಗೆ ಎಷ್ಟು ಜನ ಪ್ರತಿನಿಧಿಸಿದ್ದಾರೆ ಗೊತ್ತಿಲ್ಲ . ದಿನೇಶ ತುಳಸು ಗೌಡಾ, ರವೀಶ್ ನಾಯ್ಕ ಹಾಗೂ ಸಂಜು ಗೊನ್ನಾಗರ ಹೀಗೆ ಒಟ್ಟೂ 5 ಜನ ಪ್ರಕರಣವನ್ನು ಪ್ರತಿನಿಧಿಸಿದ್ದಾರೆ ಎಂದರೆ ಸರಿ . ಅಂತಹ ದಾಖಲಾತಿಗಳು ಇದ್ದರೆ ಇವರುಗಳು ಈಗಾಗಲೇ ದಾಖಲಾತಿಗಳನ್ನು ಹಾಜರು ಪಡಿಸುತ್ತಿದ್ದೆವು ಎಂದರೆ ಸರಿಯಲ್ಲ. ಈಗ ಮೇಲ್ಕಂಡ ಹೆಸರಿನವರು ಯಾರೂ ಕೂಡ ನಮ್ಮ ಬ್ಯಾಂಕಿನಲ್ಲಿ ಕೆಲಸ ನಿರ್ವಹಿಸುತ್ತಿಲ್ಲ ಎಂದರೆ ಸರಿ . ನಾವು ಈ ಪ್ರಕರಣದಲ್ಲಿ ಸುಳ್ಳು ದಾಖಲಾತಿಗಳನ್ನು ಹಾಜರು ಪಡಿಸಿದ್ದೇವೆ ಎಂದು ಗೊತ್ತಾಗಿ ಪ್ರಕರಣವನ್ನು ಮುಂದುವರೆಸಲು ಇಚ್ಚಿಸದೇ ಕೆಲಸ ಬಿಟ್ಟು ಹೋಗಿದ್ದಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.